



# ಮೆಗಾ ಬೈಕ್

ಪ್ರಪಂಚದಲ್ಲೇ ಅತಿ ದೊಡ್ಡ ಮೋಟಾರ್ ಬೈಕ್ ಎಂಬ ಗಿನ್ನಿಸ್ ವಿಶ್ವ ದಾಖಲೆಯ ಖ್ಯಾತಿ ಈ ಬೈಕ್‌ನದು. ಇದು 10 ಅಡಿ 26 ಇಂಚು ಉದ್ದವಿದ್ದು 5 ಅಡಿ 10 ಇಂಚುಗಳಷ್ಟು ಎತ್ತರವಿದೆ. xxl ಚಾಪರ್ ಹೆಸರಿನ ಈ ಬೈಕ್ 2 ಮೀಟರ್ 49 ಸೆಂಟಿ ಮೀಟರ್ ಅಗಲವಿದ್ದು ಬರೋಬ್ಬರಿ 5.5 ಟನ್ ತೂಕ ಹೊಂದಿದೆ.

ಇದರ ಎಂಜಿನ್ 280 ಹಾರ್ಸ್ ಪವರ್ (ಅಶ್ವಶಕ್ತಿ)ಯನ್ನು ಹೊಂದಿದೆ. ಇದು ಸಾಮಾನ್ಯ ಬೈಕ್‌ಗಿಂತ 6:1 ಸ್ಕೇಲ್ ನಷ್ಟು ದೊಡ್ಡದಿದ್ದು, ಇಂಡಸ್ಟ್ರಿಯಲ್ ಎಕ್ಸಾವೇಟರ್‌ನ ಬೃಹತ್ ಗಾಲಿಯನ್ನು ಇದಕ್ಕೆ ಅಳವಡಿಸಲಾಗಿದೆ. ಮುಂದಿನ ಗಾಲಿಯು 60 ಸೆಂಟಿ ಮೀಟರ್ ಅಗಲವಿದ್ದು 2.10 ಮೀಟರ್ ಸುತ್ತಳತೆಯನ್ನು ಹೊಂದಿದೆ. ಹಾಗೆಯೇ ಹಿಂದಿನ ಗಾಲಿ 1 ಮೀಟರ್ ಅಗಲವಿದ್ದು 2.26 ಮೀಟರ್ ಸುತ್ತಳತೆಯನ್ನು ಹೊಂದಿದೆ.

ನೆಲದಿಂದ ಹ್ಯಾಂಡಲ್ ಬಾರ್‌ನ ತುದಿಯವರೆಗೆ 5.10 ಮೀಟರ್ (16 ಅಡಿ 8.78 ಇಂಚುಗಳು)ನಷ್ಟು ಎತ್ತರವಿರುವ ಈ ಬೈಕ್‌ಅನ್ನು ಯಾರಾದರೂ ಸವಾರಿ ಮಾಡಬಹುದು. ಇನ್ನೊಂದು ಅಚ್ಚರಿಯ ವಿಷಯವೆಂದರೆ, ಈ ಬೈಕ್ ಸುಮಾರು 100 ಮೀಟರ್‌ನಷ್ಟು ದೂರವನ್ನು ಕ್ರಮಿಸಿದ ಮೇಲೆಯೇ ಇದಕ್ಕೆ ಗಿನ್ನಿಸ್ ದಾಖಲೆಯ ಮನ್ನಣೆ ಸಿಕ್ಕಿರುವುದು.

ಸುಮಾರು 7 ತಿಂಗಳ ಕಾಲ ಸತತ ಪರಿಶ್ರಮದಿಂದ ರೂಪುಗೊಂಡ ಈ ಮೆಗಾ ಬೈಕ್ ಅನ್ನು ಸೃಷ್ಟಿಸಿದ್ದು ಫ್ಯಾಬಿಯೊ ರೆಗ್ಗಿಯನಿ ಮತ್ತು ತಂಡ. ಕ್ಯಾಲಿಫೋರ್ನಿಯಾದ ಗ್ರೆಗೊರಿ ದುನ್‌ಹ್ಯಾಮ್ ನಿರ್ಮಿಸಿದ 3 ಮೀಟರ್ ಉದ್ದ, ಸುಮಾರು 1350 ಕಿಲೋ ಗ್ರಾಂ ತೂಕದ ಬೈಕ್ ಈವರೆಗೆ ಗಿನ್ನಿಸ್ ವಿಶ್ವ ದಾಖಲೆ ಹೊಂದಿತ್ತು. ಹಳೆ ದಾಖಲೆಯನ್ನು ಮರಿದು ಹೊಸ xxl ಚಾಪರ್ ಮುನ್ನುಗ್ಗಿದೆ.

■ ವಿನಯ್‌ಕುಮಾರ್ ಬಿ.ಎಚ್.

